ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 1102 |
| ಮಾನ್ಯ ಸದಸ್ಯರ ಹೆಸರು | | ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 20.12.2018 |
| ಪ್ರಶ್ನೆ | | ಉತ್ತರ |
| (ಅ) | ರಾಜ್ಯದ ಕೆಲವು ವಿಶ್ವವಿದ್ಯಾಲಯಗಳಲ್ಲಿ ವರ್ಷಗಳಿಂದ ಉಪ ಕುಲಪತಿಗಳ ಹುದ್ದೆ ಖಾಲಿ ಇದ್ದು, ಆ ಸ್ಥಾನದಲ್ಲಿ ತಾತ್ಕಾಲಿಕ ಉಪ ಕುಲಪತಿಗಳನ್ನು ನೇಮಿಸಿ ಆಡಳಿತ ನಡೆಸಲಾಗುತ್ತಿದ್ದು, ಪೂರ್ಣ ಪ್ರಮಾಣದ ಸ್ವಾತಂತ್ರವಿರದೆ ಈ ಪದ್ಧತಿಯಿಂದ ವಿಶ್ವವಿದ್ಯಾನಿಲಯದ ಆಡಳಿತವು ಕುಂಠಿತಗೊಂಡಿರುವುದು ನಿಜವೇ; | ರಾಜ್ಯದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಟುವ ಮೂರು ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳ ಹುದ್ದೆ ಖಾಲಿ ಇದ್ದು, ವಿಶ್ವವಿದ್ಯಾಲಯದ ಆಡಳಿತದ ಹಿತದೃಷ್ಟಿಯಿಂದ ಪ್ರಭಾರ ಕುಲಪತಿಗಳನ್ನು ನೇಮಿಸಲಾಗಿರುತ್ತದೆ. ಪ್ರಭಾರ ಕುಲಪತಿಗಳು ಪೂರ್ಣ ಪ್ರಮಾಣದ ಅಧಿಕಾರವನ್ನು ಚಲಾಯಿಸಲು ಅವಕಾಶವಿದ್ದು, ವಿಶ್ವವಿದ್ಯಾಲಯಗಳ ಆಡಳಿತ ಕುಂಠಿತವಾಗುವ ಸಂದರ್ಭ ಉದ್ಭವಿಸುವುದಿಲ್ಲ.. |
| (ಆ) | ರಾಜ್ಯದಲ್ಲಿರುವ ಒಟ್ಟು ವಿಶ್ವವಿದ್ಯಾನಿಲಯಗಳು ಎಷ್ಟು; (ಖಾಸಗಿ ಮತ್ತು ಸರ್ಕಾರಿ ವಿಶ್ವವಿದ್ಯಾನಿಲಯಗಳ ಬಗ್ಗೆ ಜಿಲ್ಲಾವಾರು ವಿವರ ನೀಡುವುದು) | ರಾಜ್ಯದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ 16 ಖಾಸಗಿ ಮತ್ತು 19 ಸರ್ಕಾರಿ ವಿಶ್ವವಿದ್ಯಾಲಯಗಳಿದ್ದು, ವಿವರಗಳನ್ನು ಅನುಬಂಧ– ಅ ರಲ್ಲಿ ಒದಗಿಸಿದೆ. |
| (ಇ) | ರಾಜ್ಯದ ಎಷ್ಟು ವಿಶ್ವವಿದ್ಯಾನಿಲಯಗಳಲ್ಲಿ ಉಪ ಕುಲಪತಿಗಳ ಹುದ್ದೆಗಳು ಖಾಲಿ ಇವೆ; | 1. ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು<br>2. ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು<br>3. ಕನ್ನಡ ವಿಶ್ವವಿದ್ಯಾಲಯ, ಹಂಪಿ |
| (ಈ) | ಉಪಕುಲಪತಿಗಳ ನೇಮಕಕ್ಕೆ ಇರುವ ಮಾನದಂಡಗಳೇನು; | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 14ರಂತೆ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಅಧಿನಿಯಮ 2011ರ ಪ್ರಕರಣ (13)ರಂತೆ, ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ 2009ರ ಪ್ರಕರಣ (12)ರಂತೆ, ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ 1991ರ ಪ್ರಕರಣ (13)ರಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ಅಧಿನಿಯಮ 2009ರ ಪ್ರಕರಣ (12)ರಂತೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಧಿನಿಯಮ 1994ರ ಪ್ರಕರಣ (13)ರಂತೆ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ 1992ರ ಅಧಿನಿಯಮ (10)ರಂತೆ ಹಾಗೂ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಮಾರ್ಗಸೂಚಿಗಳನ್ವಯ, ಉನ್ನತ ಮಟ್ಟದ ಸಾಮರ್ಥ್ಯ, ಪ್ರಾಮಾಣಿಕತೆ, ಸಮಗ್ರತೆ/ ಋಜುತ್ವ, ನೈತಿಕ ಮೌಲ್ಯಗಳನ್ನು ಹಾಗೂ ಸಾಂಸ್ಥಿಕ ಬದ್ಧತೆಯನ್ನು ಹೊಂದಿರುವ ವ್ಯಕ್ತಿಗಳು; ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಕನಿಷ್ಠ 10 ವರ್ಷಗಳ ಸೇವೆ ಸಲ್ಲಿಸಿದ ಅಥವಾ ತತ್ಸಮಾನವಾದ ಸ್ಥಾನಮಾನದಲ್ಲಿ ವಿಖ್ಯಾತ ಸಂಶೋಧನಾ ಅಥವಾ ಶೈಕ್ಷಣಿಕ ಆಡಳಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವುಳ್ಳ ಗಣ್ಯ ಶಿಕ್ಷಣ ತಜ್ಞರು ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿಗಳ ಹುದ್ದೆಗೆ ಅರ್ಹರಿರುತ್ತಾರೆ.<br>• ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳ ಹುದ್ದೆಗೆ ಸಂಬಂಧಿಸಿದಂತೆ ಅರ್ಹ ಪ್ರಾಧ್ಯಾಪಕರು ಖ್ಯಾತ ಜಾನಪದ ತಜ್ಞರಾಗಿರಬೇಕು.<br>• ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿಗಳ ಹುದ್ದೆಗೆ ಸಂಬಂಧಿಸಿದಂತೆ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಕ್ಷೇತ್ರದಲ್ಲಿ ಖ್ಯಾತ ಶಿಕ್ಷಣ ತಜ್ಞರಾಗಿರಬೇಕು.<br>• ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಕುಲಪತಿಗಳ ಹುದ್ದೆಗೆ ಸಂಬಂಧಿಸಿದಂತೆ, ಇಂಜಿನಿಯರಿಂಗ್, ತಂತ್ರಜ್ಞಾನ ಅಥವಾ ಶಿಕ್ಷಣ ಕ್ಷೇತ್ರದಲ್ಲಿ ತಜ್ಞರಾಗಿರಬೇಕು.<br>• ಅಕ್ಕಮಹಾದೇವಿ ವಿಶ್ವವಿದ್ಯಾನಿಲಯದ ಕುಲಪತಿಗಳ ಹುದ್ದೆಗೆ ಸಂಬಂಧಿಸಿದಂತೆ ಸಾಧ್ಯವಾದಷ್ಟು ಮಟ್ಟಿಗೆ ಒಬ್ಬ ಮಹಿಳೆಯೇ ಕುಲಪತಿಯಾಗತಕ್ಕದ್ದು; |

| | | |
|---|---|---|
| ಉ) | ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳ ನೇಮಕಕ್ಕೆ ಏಕರೂಪದ ನಿಯಮ ತರುವ ಯೋಜನೆ ಸರ್ಕಾರಕ್ಕಿದೆಯೇ; | ಇಲ್ಲ. |
| ಇ) | ಇದ್ದರೆ, ಈ ತಾತ್ಕಾಲಿಕ ವ್ಯವಸ್ಥೆಯನ್ನು ನಿಲ್ಲಿಸಿ ಉಪ ಕುಲಪತಿಗಳ ಹುದ್ದೆ ಖಾಲಿ ಆದ ತಕ್ಷಣವೇ ಹೊಸ ನೇಮಕಾತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ? | ಕುಲಪತಿಗಳ ಹುದ್ದೆಯ ಅವಧಿಯು ಮುಕ್ತಾಯವಾಗುವ ಮುನ್ನವೇ ಹೊಸ ಕುಲಪತಿಗಳ ನೇಮಕಾತಿಗಾಗಿ ಶೋಧನಾ ಸಮಿತಿಯನ್ನು ರಚಿಸಲಾಗುತ್ತಿದೆ. ನೂತನ ಕುಲಪತಿಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಮಾತ್ರ ಪ್ರಭಾರ ನೇಮಿಸಲಾಗುತ್ತಿದೆ. |

ಸಂಖ್ಯೆ: ಇಡಿ 425 ಯುಎನ್ಇ 2018

(ಜಿ.ಟಿ.ದೇವೇಗೌಡ)

ಉನ್ನತ ಶಿಕ್ಷಣ ಸಚಿವರು.

## ಅನುಬಂಧ – ಅ

### ಉನ್ನತ ಶಿಕ್ಷಣ ಇಲಾಖೆಯ ಅಧೀನದ ಸರ್ಕಾರಿ ವಿಶ್ವವಿದ್ಯಾಲಯಗಳು

| ಕ್ರಸಂ. | ಜಿಲ್ಲೆಯ ಹೆಸರು | ವಿಶ್ವವಿದ್ಯಾಲಯಗಳು |
|---|---|---|
| 1 | ಬೆಂಗಳೂರು | ಬೆಂಗಳೂರು ವಿಶ್ವವಿದ್ಯಾಲಯ |
| | | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ |
| | | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಆವರಣ |
| 2 | ಮೈಸೂರು | ಮೈಸೂರು ವಿಶ್ವವಿದ್ಯಾಲಯ |
| | | ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ |
| | | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ |
| 3 | ಬಳ್ಳಾರಿ | ಕನ್ನಡ ವಿಶ್ವವಿದ್ಯಾಲಯ, ಹಂಪಿ |
| | | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ |
| 4 | ಬೆಳಗಾವಿ | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ |
| | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ |
| 3 | ತುಮಕೂರು | ತುಮಕೂರು ವಿಶ್ವವಿದ್ಯಾಲಯ |
| 4 | ಧಾರವಾಡ | ಕರ್ನಾಟಕ ವಿಶ್ವವಿದ್ಯಾಲಯ |
| 5 | ಶಿವಮೊಗ್ಗ | ಕುವೆಂಪು ವಿಶ್ವವಿದ್ಯಾಲಯ |
| 6 | ದಾವಣಗೆರೆ | ದಾವಣಗೆರೆ ವಿಶ್ವವಿದ್ಯಾಲಯ |
| 7 | ಹಾವೇರಿ | ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ ಶಿಗ್ಗಾಂವ್ ತಾಲ್ಲೂಕು |
| 8 | ದಕ್ಷಿಣ ಕನ್ನಡ | ಮಂಗಳೂರು ವಿಶ್ವವಿದ್ಯಾಲಯ ಮಂಗಳೂರು |
| 9 | ಕಲಬುರಗಿ | ಗುಲ್ಬರ್ಗಾ ವಿಶ್ವವಿದ್ಯಾಲಯ |
| 10 | ವಿಜಯಪುರ | ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ |
| 11 | ಕೋಲಾರ | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ತಮಕಾ, ಕೋಲಾರ |

### ಉನ್ನತ ಶಿಕ್ಷಣ ಇಲಾಖೆಯ ಅಧೀನದ ಖಾಸಗಿ ವಿಶ್ವವಿದ್ಯಾಲಯಗಳು

| ಕ್ರಸಂ. | ಜಿಲ್ಲೆಯ ಹೆಸರು | ವಿಶ್ವವಿದ್ಯಾಲಯಗಳು |
|---|---|---|
| **01** | ಬೆಂಗಳೂರು | ಅಲಿಯನ್ಸ್ ವಿಶ್ವವಿದ್ಯಾಲಯ, |
| | | ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ, |
| | | ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, |
| | | ಸಿ.ಎಂ.ಆರ್. ವಿಶ್ವವಿದ್ಯಾಲಯ, |
| | | ಪಿ.ಇ.ಎಸ್. ವಿಶ್ವವಿದ್ಯಾಲಯ, |
| | | ಎಂ.ಎಸ್.ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್, |
| | | ರೇವಾ ವಿಶ್ವವಿದ್ಯಾಲಯ, |
| | | ದಯಾನಂದ ಸಾಗರ ವಿಶ್ವವಿದ್ಯಾಲಯ, |
| | | ರೈ ತಾಂತ್ರಿಕ ವಿಶ್ವವಿದ್ಯಾಲಯ, |
| | | ಗಾರ್ಡನ್ ಸಿಟಿ ವಿಶ್ವವಿದ್ಯಾಲಯ, |
| **02** | ಮೈಸೂರು | ಜೆ.ಎಸ್.ಎಸ್. ತಾಂತ್ರಿಕ ವಿಶ್ವವಿದ್ಯಾಲಯ, |
| **03** | ಮಂಡ್ಯ | ಆದಿಚುಂಚನಗಿರಿ ವಿಶ್ವವಿದ್ಯಾಲಯ, ನಾಗಮಂಗಲ |
| **04** | ಧಾರವಾಡ | ಕೆ.ಎಲ್.ಇ. ವಿಶ್ವವಿದ್ಯಾಲಯ, ಹುಬ್ಬಳ್ಳಿ |
| **05** | ದಕ್ಷಿಣ ಕನ್ನಡ | ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು |
| **06** | ಕಲಬುರಗಿ | ಶರಣ ಬಸವ ವಿಶ್ವವಿದ್ಯಾಲಯ, |
| | | ಖಾಜ ಬಂದಾನವಾಜ್ ವಿಶ್ವವಿದ್ಯಾಲಯ |